# ಪುನರ್ಕಲ್ಪ


ಪ್ರಧಾನ ಸಂಪಾದಕರು

ಪ್ರೊ. ನೀಲಗಿರಿ ತಳವಾರ


ಸಂಪಾದಕರು

ಡಾ. ರೇಣುಕಪ್ರಸಾದ್ ಬಿ.ಆರ್

ಡಾ. ನಳಿನ ಎನ್

ಡಾ. ಗೋವಿಂದರಾಯ ಎಂ

ಪ್ರೊ. ಮಂಜುನಾಥ ಹೆಚ್

# ಪುನರ್ಕಲ್ಪ

ಪ್ರಧಾನ ಸಂಪಾದಕರು
ಪ್ರೊ. ನೀಲಗಿರಿ ತಳವಾರ

ಸಂಪಾದಕರು
ಡಾ. ರೇಣುಕಪ್ರಸಾದ್ ಬಿ.ಆರ್
ಡಾ. ನಳಿನ ಎನ್.
ಡಾ. ಗೋವಿಂದರಾಯ ಎಂ.
ಪ್ರೊ. ಮಂಜುನಾಥ ಹೆಚ್

Published by
**Suvvi Publications**
Dr. B.R Ambedkar Road, Gama -577214, Shikaripura,
Shimoga District, Karnataka State
Phone :08187-222344, 9620083614
E-mail: suvvibooks@gmail.com

First Impression : 2020

Pages : 444

Paper Used : 70 gsm NS

Book Size : 1/8th Demy

© : Author

Price : 450

**ISBN : 978-81-941843-8-6**

DTP : Swetha

Cover Page : Arun Kumar G

Printed at :
Ammaji Printers, Bangalore

* * *

This book is protected by copyright laws. No part of this book is to be reproduced, transmitted, utilized or stored in any form or by any means now known or hereinafter invented, electronic, digital or mechanical, including photocopying, scanning, recording or by any information storage or retrieval system, without prior written permission from the author or publisher.



## 43ನೇ ಪುನಶ್ಚೇತನ ಕನ್ನಡ ಅಧ್ಯಾಪಕರ ಒಕ್ಕೂಟ ತುಮಕೂರು

### ಸಂಪಾದಕ ಮಂಡಳಿ

ಡಾ. ರಾಜೇಂದ್ರ ಟಿ.
ಡಾ. ಮೋಹನ ಚಂದ್ರಗುತ್ತಿ
ಪ್ರೊ.ರಾಜೇಶ್ವರಿ ಹೆಚ್.ಪಿ.
ಡಾ. ಜಾಜಿದೇವೇಂದ್ರಪ್ಪ
ಡಾ.ಚಂದ್ರಕಲಾಎಚ್.ಆರ್.
ಡಾ.ಕೆಂಪಮ್ಮ ಕಾರ್ಕಹಳ್ಳಿ
ಡಾ. ಮೈತ್ರೇಯಣಿಗದಿಗೆಪ್ಪಗೌಡರ
ಡಾ. ಸಿ. ಕೊಟ್ರೇಶ್
ಪ್ರೊ.ರವಿಕುಮಾರ್ ಹೆಚ್.ಆರ್.
ಡಾ.ಅಶೋಕ ಜಿ.ಎಸ್.
ಡಾ. ಸಿ.ಟಿ.ಜಯಣ್ಣ

**ಭಾಗ–೨ : ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯಾವಲೋಕನ** ೧೦೯
೧. ಐತಿಹಾಸಿಕ ದಾಖಲೆಯಾಗಿ ಕವಿರಾಜ ಮಾರ್ಗ ೧೧೦
– ಪ್ರೊ. ರಾಜೇಶ್ವರಿ ಹೆಚ್.ಪಿ
೨. ಜೈನ ಕಾವ್ಯಗಳಲ್ಲಿ ಶಿವ–ಗಿರಿಜೆ–ಮನ್ಮಥ ಕೆಲವು ಟಿಪ್ಪಣಿಗಳು ೧೧೭
– ಪ್ರೊ. ಎಂ.ಮಹದೇವ ಪ್ರಭು
೩. ಆತ್ಮಜ್ಞಾನಿ ಘಟ್ಟಿವಾಳಯ್ಯ ೧೨೯
– ಡಾ. ಕುಮಾರ ಬೆಳಲೆ
೪. ವಚನ ಸಾಹಿತ್ಯ– ಅಭಿವ್ಯಕ್ತಿ ಮತ್ತು ಮಾನವ ಸಂಬಂಧ ೧೩೫
– ಡಾ. ಸಿ.ಟಿ.ಜಯಣ್ಣ
೫. ತಮಿಳಿನಲ್ಲಿ ಪ್ರಭುಲಿಂಗ ಲೀಲೆ ಮತ್ತು ಬಸವ ಪುರಾಣ ೧೪೮
– ಡಾ. ಎಂ.ಎನ್. ಮಹೇಶ್
೬ ಆಂಡಯ್ಯ ಮತ್ತು ಕನ್ನಡ ೧೫೭
– ಪ್ರೊ. ಶರ್ಮಿಳಾ ವಿ.ಎನ್
೭ ಹರಿದಾಸ ಸಾಹಿತ್ಯದಲ್ಲಿ ದಲಿತ ಸಂವೇದನೆ ೧೬೩
– ಡಾ. ಸಿ. ಕೊಟ್ರೇಶ
೮. ರಾಮಧ್ಯಾನ ಚರಿತೆಯಲ್ಲಿ ಜಾತಿ ಸಂಘರ್ಷ ೧೭೧
– ಡಾ. ಅಶೋಕ ಜಿ.ಎಸ್.
೯. ಸರ್ವಜ್ಞ ತ್ರಿಪದಿಗಳ ಒಳನೋಟ ೧೮೦
– ಪ್ರೊ. ಬಿ.ಆರ್. ಜಯಕುಮಾರಿ

**ಭಾಗ–೩ : ಹೊಸಗನ್ನಡ ಸಾಹಿತ್ಯಾವಲೋಕನ** ೧೯೭
೧. ಸೌಂದರನಂದ ಮಹಾಕಾವ್ಯದಲ್ಲಿ ಬುದ್ಧ ೧೯೮
– ಪ್ರೊ. ಲೋಕೇಶ್ ಕೆ.ಪಿ
೨. ಪೂಚಂತೇ ಕತೆಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ೨೦೪
– ಡಾ. ರೇಣುಕಪ್ರಸಾದ್ ಬಿ.ಆರ್.
೩. ಕಾದಂಬರಿಗಳ ಮುಖೇನ ಸಾಮಾಜಿಕ ಪರಿವರ್ತನೆ ೨೦೮
– ಡಾ. ಮಾಧವ ಎಂ.ಕೆ.
೪. ಕನ್ನಡದ ಆಯ್ದ ಕಾದಂಬರಿಗಳಲ್ಲಿ ಸಾಮಾನ್ಯರ ಚಿತ್ರಣ ೨೧೫
– ಪ್ರೊ. ಸವಿತ ಜಿ.

೪

# ವಚನ ಸಾಹಿತ್ಯ – ಅಭಿವ್ಯಕ್ತಿ ಮತ್ತು ಮಾನವ ಸಂಬಂಧ

ಡಾ. ಸಿ.ಟಿ.ಜಯಣ್ಣ

ಮನುಷ್ಯ ಸುತ್ತಲಿನ ಕುಟುಂಬ, ಸಂಸಾರ, ಪರಿಸರ, ಪ್ರಪಂಚ, ಜಗತ್ತಿನೊಂದಿಗೆ ಯಾವ ಬಗೆಯ ಸಂಬಂಧವಿಟ್ಟುಕೊಳ್ಳಬೇಕು, ಹೇಗೆ ಬಾಳಿದರೆ ಚೆನ್ನ ಎಂಬ ಅಂಶವನ್ನು ತಿಳಿಸಿಕೊಟ್ಟಿದ್ದಾರೆ. ಈ ಲೋಕದೊಳಗೆ ಜನಿಸಿ ಬಂದ ಬಳಿಕ ಸ್ತುತಿ ನಿಂದೆಗಳಿಗೆ ವಿಚಲಿತನಾಗದೆ ಸಮಾಧಾನಿಯಾಗಿರಬೇಕು. ಇವನಾರವ ಇವನಾರವ ಎಂದು ಬಗೆಯದೆ ಎಲ್ಲರನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕು. ಮನುಷ್ಯರೆಲ್ಲರೂ ಸಮಾನರು. ಸತಿ–ಪತಿ, ಗಂಡು–ಹೆಣ್ಣು, ಮೇಲು–ಕೀಳು ಎಂಬ ಭೇದಭಾವ ಸಲ್ಲದು. ಮನುಷ್ಯನ ಬದುಕು ಪರಿಪೂರ್ಣ ವಾಗಲು ಸಜ್ಜನರ ಜ್ಞಾನಿಗಳ ಸಂಗ ಮಾಡಬೇಕು. ಯೋಗ್ಯ ಗುರುವಿನ ಮಾರ್ಗದರ್ಶನದಿಂದ ಲಿಂಗ ಜಂಗಮ ದರ್ಶನ ಸಾಧ್ಯ ಮನುಷ್ಯ ತನ್ನನ್ನು ತಾನು ತಿಳಿಯಲು ಜಗತ್ತನ್ನು ಅರಿತುಕೊಳ್ಳಲು ಸಜ್ಜನ ಸದ್ಭಾವಿಗಳ ಸಂಗ ಅಗತ್ಯವೆಂದು ಶರಣರು ಪ್ರತಿಪಾದಿಸಿದರು. ವಿಶ್ವಭ್ರಾತೃತ್ವವನ್ನು ಎತ್ತಿ ಹಿಡಿದ ಶರಣರು ಮಾನವ ಕಲ್ಯಾಣವನ್ನು ಬಯಸಿದರು. ಸಂಸಾರವೆಂಬ ರಥದಲ್ಲಿ ಸತಿಪತಿಗಳು ಸಮಾನರು. ಸತಿಪತಿಗಳು ಒಂದಾದ ಭಕ್ತಿ ಶಿವನಿಗೆ ಇಷ್ಟವಾದ ಸಂಗತಿ. ಹೆಣ್ಣು–ಗಂಡು ಎಂಬ ಬಾಹ್ಯ ರೂಪದಿಂದ ಭಿನ್ನವೆಣಿಸಬಾರದು ಎಂದು ಸಮಾನತೆಯನ್ನು ಪ್ರತಿಪಾದಿಸಿದರು. ಕಾಯಕದ ಮಹತ್ವವನ್ನು ಎತ್ತಿ ಹಿಡಿದ ಶರಣರು ಕೂಡಿ ದುಡಿದು ಹಂಚಿ ತಿನ್ನುವ ದಾಸೋಹ ಪರಂಪರೆಗೆ ಆದ್ಯತೆ ನೀಡಿದರು. ಇದರಿಂದ ಸುತ್ತಲಿನ ಬದುಕು ಸುಖಮಯವಾಗುತ್ತದೆ ಎಂದು ಹೇಳಿ ಹಾಗೆಯೇ ನಡೆದು ತೋರಿಸಿದರು.

ಶಿವಶರಣರ ಚಿಂತನೆ ಮನುಷ್ಯಕೇಂದ್ರಿತವಾದುದು. ಮನುಷ್ಯ ಪ್ರಾಣಿವರ್ಗಕ್ಕೆ ಸೇರಿದರೂ ಪ್ರಾಣಿಲೋಕವನ್ನು ಮೀರಿ ಬೆಳೆಯುವ ಅಗತ್ಯವನ್ನು ಶರಣರು ಪ್ರತಿಪಾದಿಸಿದರು. ಮನುಷ್ಯ ಅಲ್ಪಸುಖದಿಂದ ತೃಪ್ತನಾಗದೆ ಚಿರಂತನ ಆನಂದವನ್ನು ಪಡೆಯುವಂತಾಗಬೇಕು; ಬದುಕು ಸಹ್ಯವಾಗಬೇಕೆಂಬ ಆಶಯ ಶರಣರದಾಗಿತ್ತು. ಶರಣರ ವಿಚಾರಧಾರೆ ಸಾರ್ವಕಾಲಿಕವಾಗಿದೆ. ಅಂಧಶ್ರದ್ಧೆಯನ್ನು ಬದಿಗೊತ್ತಿ ವಿಚಾರಪೂರ್ಣವಾದ ಚಿಂತನೆಗಳನ್ನು ಬಿತ್ತಿದ ಅವರು ಜೀವನದ ಹೋರಾಟಕ್ಕೆ ಚಿರಂತನವಾದ ಉತ್ತರವನ್ನು ಕಂಡುಕೊಂಡಿದ್ದಾರೆ. ಮಾನವನ ವ್ಯಕ್ತಿತ್ವದ ಎಲ್ಲ ಶಕ್ತಿಗಳೂ ಸಾರ್ಥಕತೆಯನ್ನು ಪಡೆಯಲು ಬೇಕಾದ ಜೀವನ ರಹಸ್ಯವನ್ನು ಅವರು ತಿಳಿಸಿಕೊಟ್ಟರು. ಜನತೆಯ ಉದ್ಧಾರಕ್ಕೆ ಶರಣರು ವಿಶೇಷ ಆದ್ಯತೆ ನೀಡಿದರು. ಜೀವನದ ಎಲ್ಲ ಮುಖಗಳನ್ನೂ ಪೂರ್ಣದೃಷ್ಟಿಯಿಂದ ಕಾಣಲು ಮನುಷ್ಯ ನಡೆದುಕೊಳ್ಳಬೇಕಾದ ಕ್ರಮವನ್ನು ಅರುಹಿದರು.

ಶರಣರು ಮಾನವ ಸಂಬಂಧಗಳನ್ನು ಒಂದು ಮೌಲ್ಯವನ್ನಾಗಿ ಸ್ವೀಕರಿಸಿದವರು. ವ್ಯಕ್ತಿಯ ಹಾಗೂ ಸಮಾಜದ ಬೆಳವಣಿಗೆಗೆ ಈ ಮಾನವ ಸಂಬಂಧಗಳು ಪೂರಕವಾಗಿರಬೇಕೆಂದು ಅವರು ಒತ್ತಿ ಹೇಳಿದರು. ಸಮಾಜದ ಏಳ್ಗೆಯನ್ನು ಗುರಿಯಾಗಿರಿಸಿಕೊಂಡ ಶರಣರು ಸ್ತ್ರೀಶಕ್ತಿಯ ಮಹತ್ವವನ್ನು ಮನಗಂಡಿದ್ದರು. ಸಮಾಜ ಉದ್ಧಾರವಾಗಬೇಕಾದರೆ ಸ್ತ್ರೀಯ ಪಾತ್ರ ಹಿರಿದಾದುದೆಂದು ಅವರು ಬಲವಾಗಿ ನಂಬಿದ್ದರು. ಸ್ತ್ರೀ ಪುರುಷರಲ್ಲಿ ಸಮಾನತೆಯನ್ನು ಪ್ರತಿಪಾದಿಸಿದರು. ಸ್ತ್ರೀಯನ್ನು ವ್ಯಕ್ತಿಯಾಗಿ ಗುರುತಿಸಿ ಗೌರವಿಸಿದರು. ಶರಣರು ಸಕಲ ಜೀವಾತ್ಮರಿಗೆ ಲೇಸ ಬಯಸಿದರು. ಇವನಾರವ ಇವನಾರವ ಇವನಾರವ ಎಂದು ಬಗೆಯದೆ ಇವ ನಮ್ಮವ ಎಂದು ಸಾರಿ ವಿಶ್ವ ಭ್ರಾತೃತ್ವವನ್ನು ಎತ್ತಿ ಹಿಡಿದರು. ಈ ಬದುಕಿನಲ್ಲಿನ ಬೇಕು-ಬೇಡಗಳನ್ನು ತಿಳಿಹೇಳಿ ಬಾಳ್ವೆಗೆ ಬೆಳಕಾಗುವ ಬಗೆಯನ್ನು ಅರುಹಿದರು. ಸಂಬಂಧ-ಅಸಂಬಂಧಗಳ ಕುರಿತು ತಮ್ಮ ವಚನಗಳಲ್ಲಿ ಅವರು ಸಾಕಷ್ಟು ಜಿಜ್ಞಾಸೆ ನಡೆಸಿದ್ದಾರೆ.

ಕಣ್ಣಿಗೆ ಕಾಣದ, ಅದೃಶ್ಯವಾದ, ನಾನಾ ಬಗೆಯ ಬಂಧನಗಳಿಂದ ಮನುಷ್ಯನ ಜೀವನ ಈ ಲೋಕಕ್ಕೆ ಬಂಧಿತವಾಗಿರುವುದು ಎಲ್ಲರಿಗೂ ತಿಳಿದ ಸಂಗತಿ. ಬಿಡುಗಡೆಯ ಬಯಕೆ ಮಾನವನ ಸಹಜ ಪ್ರವೃತ್ತಿ. ಈ ಬಿಡುಗಡೆಗೆ ಬಾಹ್ಯ ಪ್ರಪಂಚದಲ್ಲಿ ಒಂದು ಬಗೆಯ ಅತೃಪ್ತಿ ಅನಿವಾರ್ಯ. ಈ ಪ್ರಾಪಂಚಿಕ ಸಂಸಾರದಿಂದ ಕ್ಷಣ ಹೊತ್ತು ದೂರ ನಿಂತು ಇದರ ನಶ್ವರತೆಯನ್ನು ಮನಗಾಣುವುದು ಅಗತ್ಯ. ಇದನ್ನೇ ವೀರಶೈವದಲ್ಲಿ 'ಸಂಸಾರ ಹೇಯಸ್ಥಲ' ಎಂದು ಕರೆಯಲಾಗಿದೆ. ಎಲ್ಲ ಶರಣರು ಈ ಲೌಕಿಕ ಸುಖಗಳ ವಿಚಾರದಲ್ಲಿ ಜಿಜ್ಞಾಸೆ



ನಡೆಸಿದ್ದಾರೆ. 'ಸಂಸಾರವೆಂಬ ರಾಹು ನನ್ನ ನುಂಗುತ್ತಿದೆ. ಸಂಸಾರವೆಂಬ ಸರ್ಪ ಬಂದು ಪಂಚೇಂದ್ರಿಯ ವಿಷಯವೆಂಬ ವಿಷದಿಂದ ಭಾದೆಗೊಳಗಾಗಿರುವೆ. ನನ್ನ ಮನಸ್ಸು ಚಂಚಲವಾಗಿದೆ. ಕಂಬಳಿಯಲ್ಲಿ ಕಣಕವನ್ನು ನಾದಿದಂತೆ ಸಂಸಾರಕ್ಕೆ ಅಂಟಿಕೊಂಡಿದೆ' ಎಂದಿದ್ದಾರೆ. ಇವು ಭಕ್ತನೊಬ್ಬನ ಸಾಧನೆಯ ಆರಂಭದ ಹಂತದ ತಳಮಳಗಳೂ ಆಗಿವೆ. ಇದು ಭಕ್ತಿ ಪಥದ ಮೊದಲು ಮೆಟ್ಟಿಲೂ ಆಗಿದೆ. ಅಹಂಕಾರ ನಾಶಗೊಳ್ಳುವ ಪ್ರಯತ್ನವೂ ಇದಾಗಿದೆ. ಸಂಸಾರದಲ್ಲಿರುವ ಮನುಷ್ಯ ಪ್ರತಿ ಹಂತದಲ್ಲೂ ನಾನು, ಎಲ್ಲವೂ ನನ್ನಿಂದಲೇ ಎಂಬ ಅಹಂಕಾರದಲ್ಲಿರುತ್ತಾನೆ. ನಾನಾ ತರಹದ ಮದಗಳು ಅವನನ್ನು ಆವರಿಸುತ್ತವೆ. ಅಹಂನಿಂದ ಮುಕ್ತಿ ಪಡೆಯದೇ ಏನನ್ನೂ ಸಾಧಿಸಲಾಗದು ಎಂಬ ಅಂಶ ಶರಣರಿಗೆ ಚೆನ್ನಾಗಿ ಗೊತ್ತಿತ್ತು. ಅಹಂಕಾರವನ್ನು ತೊರೆದು ಏಕನಿಷ್ಠೆಯಿಂದ ಪರಮಾತ್ಮನ ನೆನೆದವರು ಎಲ್ಲ ಬಗೆಯ ಸ್ವಾರ್ಥ ಸಂಕುಚಿತತೆಯನ್ನು ದಾಟಲು ಸಾಧ್ಯ ಎಂಬ ದೃಢ ನಿಲುವು ಶರಣರದಾಗಿತ್ತು.

'ಸಂಸಾರ' ಎಂಬ ಮಾಯೆ ಸಾಧಕನನ್ನು ನಾನಾ ಪರಿಯಲ್ಲಿ ಹಿಡಿದು ಕಾಡುತ್ತದೆ. ಅದನ್ನು ದಾಟಿ ಹೋಗುವ ಹಂಬಲಿಸುವ ಹೃದಯದ ತಳಮಳ ಸಂಸಾರದ ಬಗೆಗಿನ ವಚನಗಳಲ್ಲಿ ವ್ಯಕ್ತವಾಗಿದೆ. ಮನುಷ್ಯ ಕೇವಲ ಪಶುವಲ್ಲ. ಆತ ಬರೇ ಅನ್ನಮಯದ ಅವಶ್ಯಕತೆಗಾಗಿ ಹೋರಾಟ ಮಾಡಿದರೆ ಅದು ವ್ಯರ್ಥ. ಮನುಷ್ಯ ಬಹಿರ್ಮುಖವಾದ ವಿಷಯ ಸುಖ ಸಾಧನಗಳಲ್ಲಿ ಮೈಮರೆತು ಈ ಸಂಸಾರವೇ ಸ್ಥಿರವೆಂದು ನಂಬಿ ಜಡವಾಗಬಾರದು ಎಂಬ ಎಚ್ಚರಿಕೆ ಇಲ್ಲಿದೆ. ಮುಕ್ತಿಯ ಬಯಕೆ ಮೊಳೆಯಬೇಕಾದರೆ ಸಾಂಸಾರಿಕ ಪ್ರಪಂಚದ ಸುಖಗಳಲ್ಲಿ ಒಂದು ಬಗೆಯ ಅತೃಪ್ತಿ ಅನಿವಾರ್ಯ ಎಂಬ ಅಂಶವನ್ನು ಎಲ್ಲ ಶರಣರು ಒತ್ತಿ ಹೇಳಿದ್ದಾರೆ. ಶಾಶ್ವತವಾದ ಸತ್ಯವನ್ನು ಹುಡುಕಲು ಸಾಧಕನಿಗೆ ಅವಶ್ಯಕವಾದ ಗುಣಕರ್ಮಗಳನ್ನು ಹೇಳಿದ್ದಾರೆ. ಶರಣರು ಜೀವನದಲ್ಲಿ ನಿರಾಶವಾದಿಗಳಲ್ಲ. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ ಎಂದಿದ್ದಾರೆ. ಈ ಸಂಸಾರಿಕ ಬದುಕಿನ ಆಚೆಗಿರುವ ಆಧ್ಯಾತ್ಮಿಕ ಲೋಕದತ್ತಲೂ ಶರಣರು ನಮ್ಮ ಗಮನ ಸೆಳೆದಿದ್ದಾರೆ.

**ಬಯಿದವರೆನ್ನ ಬಂಧುಗಳು**
**ಹೊಯಿದವರೆನ್ನ ಹೊರೆದವರೆಂಬೆ ಬಯಿದವರೆನ್ನ ಬಂಧುಗಳೆಂಬೆ**
**ನಿಂದಿಸಿದವರೆನ್ನ ತಂದೆತಾಯಿಗಳೆಂಬೆ ಆಳಿಗೊಂಡವರೆನ್ನ**
**ಆಳ್ದವರೆಂಬೆ**
**ಜರಿದವರೆನ್ನ ಜನ್ಮಬಂಧುಗಳೆಂಬೆ**
**ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ**
**ಕೂಡಲಸಂಗಮದೇವಾ**

ಮಾಡದೆ ತಾನು ಮಾಡುವುದೆಲ್ಲವೂ ಪರಶಿವನಿಗಾಗಿ ಎಂದು ತಿಳಿದರೆ ಅದು ಸಾರ್ಥಕ ಸಹಭೋಜನ ಎಂಬ ಅರ್ಥವಿಲ್ಲಿದೆ. ಭಕ್ತನಾದವನು ಇಡೀ ಕಾಯವೇ ಪರಶಿವನದು(ಪ್ರಸಾದಕಾಯ) ಎಂದು ತಿಳಿದು ನಡೆದುಕೊಳ್ಳಬೇಕೆಂಬ ನಿಲುವು ಇಲ್ಲಿದೆ. ಎಲ್ಲವೂ ಲಿಂಗಕ್ಕೆ ಸಲ್ಲದೆಂದರಿತು ಸಂಕಲ್ಪಸೂತಕವಳಿದು ಭಕ್ತನಾದವನು ನಡೆದುಕೊಳ್ಳಬೇಕು. ಸಹಭೋಜನ ಮಾಡುವುದು ಲಿಂಗ ಭರಿತಾರ್ಪಣ. ಲಿಂಗಕ್ಕೂ ತನಗೂ ಭಿನ್ನ ಭಾವವಿಲ್ಲದೆ ಲಿಂಗದೊಳಗೆ ಸಲೆ ಸಂದು ಒಂದಾಗಿ ಕೂಡಿದುದು ಶರಣ ಭರಿತಾರ್ಪಣ ಎಂದಿದ್ದಾನೆ ಅರಿವಿನ ಮಾರಿತಂದೆ. ನಿಜವಾದ ಪ್ರಸಾದಿಯು ಪರಶಿವನಿಗೆ ವಸ್ತುಗಳನ್ನು ಅರ್ಪಿಸಿ ಅವುಗಳನ್ನು ಸ್ವೀಕರಿಸದೆ ತನ್ನನ್ನೇ ಸಂಪೂರ್ಣವಾಗಿ ಅರ್ಪಿಸಿಕೊಳ್ಳಬೇಕೆಂಬ ನಿಲುವು ಇಲ್ಲಿ ಅಭಿವ್ಯಕ್ತಗೊಂಡಿದೆ. ಪ್ರಸಾದದ ಪರಿಕಲ್ಪನೆ ಹಂತ ಹಂತವಾಗಿ ಮೇಲಕ್ಕೇರಿ ಸರ್ವಾರ್ಪಣೆಯಲ್ಲಿ ಮುಕ್ತಾಯವಾಗುವುದನ್ನು ನಾವಿಲ್ಲಿ ಕಾಣಬಹುದು.

## ಹೆಣ್ಣು –ಗಂಡು

**ಗಂಡು ಮೋಹಿಸಿ ಹೆಣ್ಣ ಹಿಡಿದಡೆ**
**ಅದು ಒಬ್ಬರ ಒಡವೆ ಎಂದು ಅರಿಯಬೇಕು**
**ಹೆಣ್ಣು ಮೋಹಿಸಿ ಗಂಡ ಹಿಡಿದಡೆ**
**ಉತ್ತರವಾವುದೆಂದರಿಯಬೇಕು**
**ಈ ಎರಡರ ಉಭಯವ ಕಳೆದು ಸುಖ ತಾನಾಗಬಲ್ಲಡೆ**
**ನಾಸ್ತಿನಾಥನು ಪರಿಪೂರ್ಣನೆಂಬೆ**

ಇದು ಗೊಗ್ಗವ್ವೆಯ ವಚನ. ಸ್ತ್ರೀಪರ ಚಿಂತನೆ ಸ್ಥಾಪಿತ ಮೌಲ್ಯವನ್ನು ಇಲ್ಲಿ ಪ್ರಶ್ನಿಸುವ ಕೆಲಸ ನಡೆದಿದೆ. ಸ್ತ್ರೀ ಸ್ವಾಭಿಮಾನ ಗುಣ ಎದ್ದುಕಾಣುತ್ತದೆ. ಹೆಣ್ಣೊಬ್ಬಳನ್ನು ಗಂಡು ಮೋಹಿಸಿ ಪ್ರೀತಿಸಿ ತನ್ನವಳನ್ನಾಗಿ ಮಾಡಿಕೊಂಡರೆ ಆತ ಆಕೆಯನ್ನು ತನ್ನ ಸ್ವತ್ತು (ಒಡವೆ) ಎಂದೇ ಭಾವಿಸುತ್ತಾನೆ. ಹೆಣ್ಣೊಬ್ಬಳು ಗಂಡೊಬ್ಬನನ್ನು ಮೋಹಿಸಿ ತನ್ನವಳೆಂದು ಮಾಡಿಕೊಂಡರೆ ಅದಕ್ಕೆ ಏನೆಂದು ಕರೆಯಬೇಕು ಎಂದು ಗೊಗ್ಗವ್ವೆ ಮಾರ್ಮಿಕವಾಗಿ ಪ್ರಶ್ನಿಸಿದ್ದಾಳೆ. ಗಂಡು ಮೋಹಿಸುವುದಾದರೆ ಹೆಣ್ಣು ಆತನ ಒಡವೆಯಾಗಬೇಕು. ಆದರೆ ಹೆಣ್ಣು ಮೋಹಿಸಿದರೆ ಗಂಡು ಆಕೆಯ ಒಡವೆಯಾಗುವನೆ ಎಂದು ಸವಾಲು ಹಾಕುತ್ತಾಳೆ. ಸಮಾಜದ ಸ್ಥಾಪಿತ ನಿಲುವನ್ನು ಧಿಕ್ಕರಿಸುವುದರ ಮೂಲಕ ತಣ್ಣಗಿನ ಪ್ರತಿಭಟನೆ ಇಲ್ಲಿ ವ್ಯಕ್ತವಾಗಿದೆ. ಯಾರಿಗೆ ಯಾರೂ ವಸ್ತು, ಒಡವೆಯಾಗಬಾರದು. ಈ ಇಬ್ಬರಲ್ಲಿ ಭೇದಭಾವ ಕಳೆದರೆ ಸುಖಮಯ ಬದುಕು ಸಾಧ್ಯ. ಹೆಣ್ಣು ಗಂಡು ಸಮಾನ ಅಂದಾಗ ಮಾತ್ರ ಸಮಾಜ; ಬದುಕು ಪರಿಪೂರ್ಣವಾಗಿ ಸುಖ ನೆಮ್ಮದಿ ಸಾಧ್ಯ ಎಂಬ ಆಶಯ ಇಲ್ಲಿ ಮೂಡಿ ಬಂದಿದೆ.



## ಪರಾಮರ್ಶನ ಗ್ರಂಥಗಳು

1) ಬಸವ ದರ್ಶನ – ದೇ.ಜವರೇಗೌಡ

2) ವಿಷಯ ವಚನ ಸಂಪುಟಗಳು – ಸಂ. ಡಾ.ಸಂಗಮೇಶ ಸವದತ್ತಿಮಠ

3) ಶರಣರ ಅನುಭಾವ ಸಾಹಿತ್ಯ – ಡಾ.ಹೆಚ್. ತಿಪ್ಪೇರುದ್ರಸ್ವಾಮಿ

4) ಬಸವ ಧರ್ಮ – ಬಸವರಾಜಪ್ಪ ಗು. ಮೆಣಸಿನಕಾಯಿ

5) ವಚನ ಮಾರ್ಗ – ಪ್ರ ಸಂ.ಡಾ.ಶಿವಮೂರ್ತಿ ಮುರುಘಾ ಶರಣರು

6) ವಿಷಯ ವಚನ ಸಂಪುಟಗಳು – ಸಂ ಡಾ.ಸಂಗಮೇಶ ಸವದತ್ತಿಮಠ ಸಂಪುಟ 1 ರಿಂದ 14 ಸಂಪುಟಗಳು